**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**O.S. No. 169/2023**

**ಸಾಕ್ಷಿಯನ್ನು ದಿನಾಂಕಃ 15.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಜಿ.ಪಿ.ಆರ್. ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಸಾಕ್ಷೀದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀಮತಿ. ಹೆಚ್.ವಿ.ಎಸ್. ವಕೀಲರಿಂದಃ**

ತಾವು ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯರು ಯಾರ್ಯಾರ ವಿರುದ್ಧ ದಾವೆ ಮಾಡಿರುತ್ತಾರೆಂದರೆ ಸಾಕ್ಷಿಯು ರವಿ ಮತ್ತು ಗಾಯಿತ್ರಿರವರ ವಿರುದ್ಧ ದಾವೆ ಮಾಡಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿಯರು ತಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಸುಮಾರು 25 ವರ್ಷಗಳಿಂದ ಪರಿಚಯ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಎನ್. ಬೇಗೂರು ಗ್ರಾಮದಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿಯು ಗಾಯಿತ್ರಿ ವೆಂಕಟಸ್ವಾಮಿ ಬೆಟ್ಟದಲ್ಲಿ ವಾಸವಿರುತ್ತಾರೆಂದು ನುಡಿಯುತ್ತಾರೆ. ರವಿ ಎನ್. ಬೇಗೂರು ಗ್ರಾಮದಲ್ಲಿ ವಾಸವಿರುತ್ತಾರೆಂದು ನುಡಿಯುತ್ತಾರೆ. ದಾವಾ ಸ.ನಂ. 43 ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ 05 ಎಕರೆ ಇರುವುದು ಗೊತ್ತು ಎನ್ನುತ್ತಾರೆ. ವಾದಿಯರು ದಾವಾ ಆಸ್ತಿಗೆ ಸಂಬಂಧಿಸಿದಂತೆ ತಮ್ಮ ಹೆಸರಿಗೆ ಇರುವ ಬಗ್ಗೆ

ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚೆನ್ನಶೆಟ್ಟಿ ಮತ್ತು ಚೆನ್ನಬಸವಶೆಟ್ಟಿ ಒಬ್ಬರದೇ ಹೆಸರೋ ಅಥವಾ ಬೇರೆ-ಬೇರೆ ಹೆಸರೋ ಎಂದರೆ ಸಾಕ್ಷಿಯು ಬೇರೆ-ಬೇರೆ ಎನ್ನುತ್ತಾರೆ. ಯಾರು ದಾವೆ ಮಾಡಿರುತ್ತಾರೆಂದು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಚೆನ್ನಬಸವಶೆಟ್ಟರವರ ಕುಟುಂಬಸ್ಥರು ದಾವೆ ಮಾಡಿರುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಬಗ್ಗೆ ಮತ್ತು ಚೆನ್ನಶೆಟ್ಟಿ ಮತ್ತು ಚೆನ್ನಬಸವಶೆಟ್ಟರವರ ಕುಟುಂಬದ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರು ವಾದಿಯರ ಪರ ಬಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರ ತಾಯಿ ನನಗೆ ಗೊತ್ತು ಎಂದರೆ ಸರಿ. ಪ್ರತಿವಾದಿಯರು ಎನ್. ಬೇಗೂರು ಗ್ರಾಮದಲ್ಲಿದ್ದುಕೊಂಡು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ತಮ್ಮ ಪ್ರಮಾಣ ಪತ್ರದಲ್ಲಿ 9 ನೇ ಪ್ರತಿವಾದಿ ಮಹದೇವಮ್ಮರವರ ಗಂಡ ಚೆನ್ನಶೆಟ್ಟಿ ಎಂದು ಬರೆಸಿರುತ್ತೇನೆಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಏನೂ ವಿಚಾರ ಗೊತ್ತಿಲ್ಲದಿದ್ದರು ವಾದಿಯರು ಕರೆದುಕೊಂಡು ಬಂದು ನನಗೆ ಸುಳ್ಳು ಸಾಕ್ಷ್ಯ ನುಡಿಯುವಂತೆ ಹೇಳಿದ್ದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**